ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಎಸ್ ವಕೀಲವರಿಂದಃ

ನನ್ನ ತಂದೆ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡು 40 ವರ್ಷ ಆಗಿರಬಹುದಾ ಎಂದರೆ ನನಗೆ ಗೊತ್ತಿಲ್ಲ. ವಾದಿ ಅಮೇರಿಕಾದಲ್ಲಿ ಇದ್ದಾರೆ. 1 ನೇ ಪ್ರತಿವಾದಿ ಎಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಪುನಃ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಹಾಜರಾಗಿರುತ್ತಾರೆ. ಅವರು ನನ್ನ ಪಾಟೀ ಸವಾಲು ಆದ ನಂತರ ಅನಾರೋಗ್ಯದಿಂದ ಬಳಲಿದ್ದು ನಾನು ಅವರನ್ನು ಹೋಗಿ ಬೇಟೆ ಮಾಡಿರುತ್ತೇನಾ ಎಂದರೆ ಸಾಕ್ಷಿಯು ನಾನು ಅನಾರೋಗ್ಯದಿಂದ ಬಳಲುತ್ತಿದ್ದೆ ನೋಡಲು ಆಗಲಿಲ್ಲ ಎಂದು ನುಡಿಯುತ್ತಾರೆ. ಐಜೂರ ಹೊಲ ಮನೆಯಲ್ಲಿ ಮೊದಲಿನಿಂದಲೂ 3 ನೇ ಪ್ರತಿವಾದಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಯಾವ ಯಾವ ಆಸ್ತಿ ಇತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಈ ದಾವೆಯಲ್ಲಿ ಪಕ್ಷ ಗಾರರಾಗಿ ಸೇರಿಕೊಂಡು ಭಾಗ ಬೇಕು ಎಂದು ಕೇಳಿದಾಗ ವಾದಿ ಯಾವ ಆಸ್ತಿಗೆ ಭಾಗ ಕೋರಿ ದಾವೆ ಹೂಡಿರುತ್ತಾರೆ ಎಂದು ನಾನು ತಿಳಿದು ಕೊಂಡಿರುತ್ತೇನಾ ಎಂದರೆ ಸಾಕ್ಷಿಯು ವಕೀಲರ ಬಳಿ ಆ ಬಗ್ಗೆ ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ಅವರ ಆಸ್ತಿ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಳ್ಳಲು ಯಾವುದೇ ಅರ್ಜಿ

ಸಲ್ಲಿಸಿರುವುದಿಲ್ಲ. ನಾನು ಆಸ್ತಿಗಳ ವಿಚಾರವಾಗಿ ಜಂಟೀ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಯಾರ ಜೊತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ವಿವರಗಳನ್ನು ನಾನು ಹೇಳಿರುವುದಿಲ್ಲ. 5 ವರ್ಷದ ಹಿಂದೆ ರಾಮನಗರದ ನೊಂದಣಿ ಕಚೇರಿಗೆ ಅರ್ಜಿ ಹಾಕಿ ದಾಖಲೆ ತೆಗೆದುಕೊಳ್ಳಲು ಹೋಗಿರುತ್ತೇನಾ ಎಂದರೆ ಹೋಗಿರುವುದಿಲ್ಲ. ದಿ:4-8-1999 ವಿಭಾಗ ಪತ್ರ ನನಗೆ ಅನ್ವಯ ಆಗುವುದಿಲ್ಲ ಎಂದು ನನ್ನ ವಕೀಲರಿಗೆ ನಾನು ತಿಳಿಸಿರುವುದಿಲ್ಲ. 1999 ರಲ್ಲಿ ದಾವಾ ಆಸ್ತಿಗಳ ಬೆಲೆ ಎಷ್ಟು ಇತ್ತು ಎಂದು ಈಗ ಎಷ್ಟು ಬೆಲೆ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ದಿ:4-8-1999 ವಿಭಾಗ ಪತ್ರ ಸಮವಾಗಿ ಆಗಿರುವುದಿಲ್ಲ ಎಂದು ಮಾಹಿತಿಯನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನಾ ಎಂದರೆ ಕೊಟ್ಟಿರುವುದಿಲ್ಲ. ವಾದಿ ಮತ್ತು 3 ನೇ ಹಾಗೂ 1 ನೇ ಪ್ರತಿವಾದಿ ಜೊತೆ ಭಾಗ ಕೊಡಿ ಎಂದು ಮಾತುಕತೆ ಆಗಿರುವುದಿಲ್ಲ ಮತ್ತು ಯಾವುದೇ ಬರವಣಿಗೆ ಆಗಿರುವುದಿಲ್ಲ. ಚಿಕ್ಕೇಗೌಡ ಮತ್ತು ಶಿವಲಿಂಗಯ್ಯ ಅವರಿಬ್ಬರೂ ನನ್ನ ತಮ್ಮಂದಿರು. ನಂಜಮ್ಮ ಅಂದರೆ ನಾನೇ. ಗೌರಮ್ಮ, ಚೆನ್ನಮ್ಮ ನನ್ನ ತಂಗಿಯರು. ನಿಪಿ-4 ರಲ್ಲಿ ಉಲ್ಲೇಖ ಇರುವ ಚಿಕ್ಕೇಗೌಡ ಮತ್ತು ಶಿವಲಿಂಗಯ್ಯ ಅವರಿಬ್ಬರೂ ನನ್ನ ತಮ್ಮಂದಿರು. ನಂಜಮ್ಮ ಅಂದರೆ ನಾನೇ. ಗೌರಮ್ಮ, ಚೆನ್ನಮ್ಮ ನನ್ನ ತಂಗಿಯರು. ವಕೀಲರಾದ ರಾಮಕೃಷ್ಣೇ ಗೌಡರ ಬಳಿ ನಾನು ಇತ್ತೀಚಿಗೆ ಹೋಗುತ್ತಿಲ್ಲ. ಶಿವಲಿಂಗಯ್ಯ ಅವರ ಹೆಸರಿನಲ್ಲಿ ಎಲ್ಲಾ ಕಂದಾಯ ದಾಖಲೆಗಳನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ಹೊಲದಿಂದ ನಿವೇಶನಗಳನ್ನು 3 ನೇ ಪ್ರತಿವಾದಿ ಪರಿವರ್ತನೆ ಮಾಡಿದ್ದು ಅದನ್ನು ಪ್ರಶ್ನೆ ಮಾಡಿರುತ್ತೇನಾ ಎಂದರೆ

ಮಾಡಿರುವುದಿಲ್ಲ. ದಾವಾ ಆಸ್ತಿಗಳು 1999 ರಲ್ಲಿ ಭಾಗ ಆಗಿದ್ದು ಈಗ ನನಗೆ ಮತ್ತು ನನ್ನ ತಂಗಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆಯೇ 1999 ವಿಭಾಗ ಪತ್ರಕ್ಕೆ ನಾನು ಮತ್ತು ನನ್ನ ಸಹೋದರರು ಹಾಗೂ ಸಹೋದರಿಯರು ಸಹಿ ಮಾಡಿದ್ದರೂ ಕೂಡ ಸಹಿ ಮಾಡಿರುವುದಿಲ್ಲ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪ್ಪಾಜಿ ಗೌಡ ಸಂಬಂಧದಲ್ಲಿ ದೊಡ್ಡಪ್ಪನ-ಚಿಕ್ಕಪ್ಪನ ಮಗ ಆಗಬೇಕು. 19-20 ವರ್ಷದ ಹಿಂದೆ ದಾವಾ ಆಸ್ತಿಗಳ ಬಗ್ಗೆ ಅವರ ಜೊತೆ ಮಾತನಾಡಿರುತ್ತೇನಾ ಎಂದರ ಮಾತನಾಡಿರುವುದ್ಲಿ. ಅಪ್ಪಾಜಿ ಗೌಡ ಮತ್ತು ವಕೀಲರಾದ ರಾಮಕೃಷ್ಣ ಗೌಡರನ್ನು ಸಾಕ್ಷಿ ನುಡಿಸುತ್ತೇನಾ ಎಂದರೆ ಸಾಕ್ಷಿಯು ನನಗೆ ಏನು ಕೊಡಬೇಕೋ ಕೊಡಿ ಅವರನ್ನು ಸಾಕ್ಷಿ ನುಡಿಸುವುದಿಲ್ಲ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯನ್ನು ನಾನು ಮಾತನಾಡಿಸುವುದಿಲ್ಲ. 1999 ಇಸವಿಯಲ್ಲಿಯೇ ವಿಭಾಗ ಆಗಿದ್ದು ದಾವಾ ಆಸ್ತಿಗಳೆಲ್ಲಾ ಈಗ ಸಂಪೂರ್ಣವಾಗಿ 3 ನೇ ಪ್ರತಿವಾದಿಗೆ ಸೇರಿದ್ದಾಗಿದ್ದು ಇತರೇ ಪಕ್ಷಗಾರರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

ಪಿ.ಡಬ್ಲ್ಯೂ.2

ಪಿ.ಡಬ್ಲ್ಯೂ.2